## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2015-16ನೇ ಸಾಲಿನ 14ನೇ ಹಣಕಾಸು ಆಯೋಗದ ಎರಡನೇ ಕಂತಿನ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/44/ಗ್ರಾಪಸ/15, ದಿನಾಂಕ:19-08-2015, 06-10-2015, 29-02-2016.
2. ಭಾರತ ಸರ್ಕಾರದ ಆದೇಶ ಸಂಖ್ಯೆ:ಎಫ್:13(12)/ಎಫ್ಎಫ್‌ಸಿ/ಎಫ್‌ಸಿಡಿ/2015-16,ದಿನಾಂಕ: 31-03-2016.

**ಪ್ರಸ್ತಾವನೆ:**

14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2015-16ನೇ ಸಾಲಿನಿಂದ 2019-20ರ ಸಾಲಿನವರೆಗಿನ 5 ವರ್ಷದ ಅವಧಿಗೆ ಸಾಮಾನ್ಯ ಮೂಲ ಅನುದಾನ ರೂ.8359.79ಕೋಟಿಗಳನ್ನು ಭಾರತ ಸರ್ಕಾರವು ನಿಗಧಿಪಡಿಸಿರುತ್ತದೆ.

ಮೇಲೆ ಓದಲಾದ (1)ರ ಆದೇಶದಲ್ಲಿ 14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2015-16ನೇ ಸಾಲಿನಲ್ಲಿ ಸಾಮಾನ್ಯ ಮೂಲ ಅನುದಾನದ ಮೊದಲನೇ ಕಂತು ರೂ.501,43,00,000/- (ಐದು ನೂರ ಒಂದು ಕೋಟಿ ನಲವತ್ಮೂರು ಲಕ್ಷಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಭಾರತ ಸರ್ಕಾರವು 14ನೇ ಹಣಕಾಸು ಆಯೋಗದ 2015-16ನೇ ಸಾಲಿನ ಸಾಮಾನ್ಯ ಮೂಲ ಅನುದಾನದ (General Basic Grants) ಲೆಕ್ಕ ಶೀರ್ಷಿಕೆ 2515-00-198-6-11-300(ಯೋಜನೇತರ)ಯಡಿ ಎರಡನೇ ಕಂತಿನ ಅನುದಾನ ರೂ.470,93,47,000(ನಾಲ್ಕುನೂರ ಎಪ್ಪತ್ತು ಕೋಟಿ ತೊಂಬತ್ತೂರು ಲಕ್ಷದ ನಲವತ್ತೇಳು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತಾರೆ. ಈ ಅನುದಾನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಇಂಟರ್‌ನೆಟ್ ಬ್ಯಾಂಕಿಂಗ್ ಮುಖಾಂತರ ನೇರವಾಗಿ ಸಂಬಂಧಪಟ್ಟ ಬ್ಯಾಂಕು ಖಾತೆಗಳಿಗೆ ಜಮೆ ಮಾಡಲು ಸರ್ಕಾರವು ನಿರ್ಧರಿಸಿರುತ್ತದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾಪಸ 2015, ದಿನಾಂಕ: 31-03-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2015-16ನೇ ಸಾಲಿನ ಎರಡನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಭಾರತ ಸರ್ಕಾರವು ರಾಜ್ಯಕ್ಕೆ ಬಿಡುಗಡೆ ಮಾಡಿರುವ ಲೆಕ್ಕ ಶೀರ್ಷಿಕೆ:2515-00-198-6-11-300(ಯೋಜನೇತರ)ಯಡಿ ಎರಡನೇ ಕಂತಿನ ಅನುದಾನ ರೂ.470,93,47,000(ನಾಲ್ಕುನೂರ ಎಪ್ಪತ್ತು ಕೋಟಿ ತೊಂಬತ್ತೂರು ಲಕ್ಷದ ನಲವತ್ತೇಳು ಸಾವಿರ ರೂಪಾಯಿಗಳು ಮಾತ್ರ)ಗಳ ಅನುದಾನವನ್ನು 6019 ಗ್ರಾಮ ಪಂಚಾಯತಿಗಳ ಸಂಬಂಧಪಟ್ಟ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಆನ್‌ಲೈನ್ ಮುಖಾಂತರ ಜಮೆ ಮಾಡಲು ಆದೇಶಿಸಿದೆ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗುವ ಹಣವನ್ನು ನಿರ್ದೇಶಕರು(ಪಂ.ರಾಜ್-2) ಹಾಗೂ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಮೇಲುರುಜುವಿನೊಂದಿಗೆ ರಾಜ್ಯ ಹುಜೂರ್ ಖಜಾನೆಯಿಂದ ಪೇಯಿಸ್ ರಸೀದಿಯ ಮೇಲೆ ಡ್ರಾ ಮಾಡಿ ನಂತರ ಆರ್.ಟಿ.ಜಿ.ಎಸ್. ಮುಖಾಂತರ 14ನೇ ಹಣಕಾಸು ಆಯೋಗದ ಉಳಿತಾಯ ಖಾತೆ ಸಂಖ್ಯೆ:64062923099, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, "ಜಿ ಸೇವಾ" ಬ್ರಾಂಚ್, ಲೇಡಿ ಕರ್ಜನ್ ರಸ್ತೆ, ಬೆಂಗಳೂರು-560001 (IFSC CODE SBMY0040681) ಇವರಿಗೆ ಬಿಡುಗಡೆಗೊಳಿಸಿ ನಂತರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ ಇಂಟರ್‌ನೆಟ್ ಬ್ಯಾಂಕಿಂಗ್ ಮುಖಾಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಮೊತ್ತದ ಅನುಸಾರ ಬಿಡುಗಡೆ ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ) ಕರ್ನಾಟಕ ಸಿ ಬ್ಲಾಕ್, ಹೊಸ ಕಟ್ಟಡ ಪಿ.ಬಿ. ನಂ.5398 ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ಸದರಿ ಅನುದಾನದ ಸಮರ್ಪಕ ಬಳಕೆ ಬಗ್ಗೆ ಸೂಕ್ತ ಮೇಲ್ವಿಚಾರಣೆ ನಡೆಸುವ ವ್ಯವಸ್ಥೆ ಕಲ್ಪಿಸಲು ತಿಳಿಸಿದೆ.
3. ರಾಜ್ಯದ ಮುಖ್ಯ ಲೆಕ್ಕಾಧಿಕಾರಿಗಳಿಗೆ/ಮುಖ್ಯ ಯೋಜನಾಧಿಕಾರಿಗಳಿಗೆ ಕಳುಹಿಸಿದೆ.
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ (ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ) ಸದರಿ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಲು ತಿಳಿಸಿದೆ.
5. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಕರ್ನಾಟಕ ವಿಕಾಸ/ ವೆಬ್‌ಸೈಟ್.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ&ಆರ್) ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಉಪ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), 4ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ರವರ ಆಪ್ತ ಸಹಾಯಕರು.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.
7. ನಿರ್ದೇಶಕರು (ಪಂ.ರಾಜ್-1&2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.